SRI SUBBAYYA SHETTY (Minister of State for Information and Power).—

(*a*) No.

(*b*) Does not arise in view of reply to clause (*a*) above.

ಶ್ರೀ ಪಿ. ಎಂ. ಭಾಂಗಿ.—"ರಾಜ್ಯದ ಚಲನಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಗೊಳಿಸುವ ಸಲಹೆ ಇದೆಯೇ" ಎಂದು ಕೇಳಿದ್ದಕ್ಕೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದೀರಿ, ಹಾಗಾದರೆ ಇದಕ್ಕೆ ಕಾರಣಗಳು ಏನು ?

ಶ್ರೀ ಬಿ ಸುಬ್ಬಯ್ಯ ಶೆಟ್ಟಿ.—ಈಗ ಆ ಪ್ರಪೋಜಲ್ ಇಲ್ಲ ಎಂದು ಹೇಳಿದ್ದೇನೆ ಅಷ್ಟೆ.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಸಿನಿಮಾಮಂದಿರಗಳನ್ನು ರಾಷ್ಟ್ರೀಕರಣ ಮಾಡುವ ಪ್ರಪೋಜಲ್ ಇಲ್ಲ ಎಂದು ಹೇಳಿದ್ದೀರಿ ಅದಕ್ಕೆ ಕಾರಣಗಳು ಏನು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ? ಯಾವ ಕಾರಣಕ್ಕಾಗಿ ಆ ಪ್ರಪೋಜಲ್ ಕೈ ಬಿಟ್ಟಿದ್ದೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅದನ್ನು ನಾವು ಪರ್ಯಾಲೋಚನೆ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಈಗ ಅದು ನಮ್ಮ ಮುಂದೆ ಪರ್ಯಾಲೋಚನೆಯಲ್ಲಿಲ್ಲ ಎಂದು ಹೇಳಿದ್ದೀರಿ, ಆದರೆ ರಾಜ್ಯದ ಬಹುಭಾಗಗಳಿಂದ ಆ ಬಗ್ಗೆ ಒತ್ತಾಯ ಇದೆ. ಈ ದೃಷ್ಟಿಯಿಂದ ಪುನ: ಈ ಸಿನಿಮಾ ಮಂದಿರಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಈ ಸಿನಿಮಾ ಮಂದಿರಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಒಂದು ಹಂತದಲ್ಲಿ ಸರ್ಕಾರ ಆಲೋಚನೆ ಮಾಡಿದ್ದು ನಿಜ, ಆದರೆ ಈಗ ಮತ್ತೆ ಆ ವಿಚಾರವನ್ನು ಫರ್ದರ್ ಪರ್‌ನ್ಯೂ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸಿನಿಮಾ ಮಂದಿರಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದು ಹೇಳಿದ್ದನ್ನು ತಮ್ಮ ಪಕ್ಷದ ಅಧ್ಯಕ್ಷರು ಅದನ್ನು ವಿರೋಧಿಸಿದ್ದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.— ಪೊವಲು ಏನೇನೋ ನಡೆದಿದೆ. ಈಗ ಈ ಬಗ್ಗೆ ಯಾರು ಯಾರು ಏನು ಪ್ರಯತ್ನ ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ. ಆದರೆ ಈಗ ಆ ವಿಷಯವನ್ನು ಇಲ್ಲಿ ಮಾತನಾಡುವುದು ನಮಂಜಸ ಅಲ್ಲ

ಶ್ರೀ ಕೋಣಂದೂರು ಲಿಂಗಪ್ಪ.—ಈ ಅಭಿಪ್ರಾಯದಲ್ಲಿ ನಿಮ್ಮ ವಿವಾದ ಇದೆಯೇ ?

ಶ್ರೀ ಡಿ. ದೇವರಾಜ ಅರಸ್ —ಈ ಬಗ್ಗೆ ಎಷ್ಟರಮಟ್ಟಿಗೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

Advances by the Commercial Banks

15 SRI V. V. WAI (Shirahatti) —Will the Chief Minister be pleased to state :—

(*a*) whether Government is aware that the banks were nationalised in the country ;

(*b*) whether Government is aware of the fact that the nationalised banks are issuing large sums of money to hotels, cinema theatres in urban areas ;

(*c*) whether Government would issue directions for advancing money for the ryots who constitute 80 per cent of population of the state for digging wells and for purchasing sprinklers and pumpsets ?

SRI D. DEVARAJ URS (Chief Minister) —

(*a*) Yes.

(*b*) and (*c*) According to the recent official figures obtained from the Reserve Bank of India, a sum of Rs 732 crores has been advanced by the Commercial Banks upto the end of June, 1976. A total amount of Rs 296 crores which includes Rs. 123 crores given to agricultural sector has been advanced to the priority sectors Details are not available regarding finacial help rendered by the Banks to the hotels and theatres in the urban areas. Since State Government has no power to give directions to the Banks, they have been persuaded to advance large sums to agricultural sector.

ಶ್ರೀ ವಿ. ವಿ. ಪಾಟೀಲ.—ಸ್ವಾಮಿ ನನ್ನ ಪ್ರಶ್ನೆ "ದೇಶದಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣ ವಾದುದು ಸರ್ಕಾರಕ್ಕೆ ಅರಿಕೆ ಇದೆಯೇ" ಎಂದು ಕೇಳಿದ್ದಕ್ಕೆ ಉತ್ತರವಾಗಿ "ಹೌದು" ಎಂದು ಉತ್ತರ ಕೊಟ್ಟಿದ್ದೀರಿ ; ಅದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೋಟಲುಗಳನ್ನು ಮತ್ತು ಸಿನಿಮಾ ಥಿಯೇಟರುಗಳನ್ನು ಕಟ್ಟಲು ರಾಷ್ಟ್ರೀಕೃತ ಬ್ಯಾಂಕುಗಳು ಅಪಾರ ಹಣವನ್ನು ಸಾಲ ಕೊಡುತ್ತಿವೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಸಾಕಷ್ಟು ಹಣವನ್ನು ಸಾಲ ಕೊಡುತ್ತಿಲ್ಲ ಇದಕ್ಕೆ ಕಾರಣವೇನೆಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ನಾನು ಅದನ್ನು ತಿಳಿಸುವುದಕ್ಕೆ ಆದು ನನ್ನ ಕೈಯ್ಯಲ್ಲಿ ಇಲ್ಲ. ಅದು ರಿಜರ್ವ್ ಬ್ಯಾಂಕ್ ಪಾಲಸಿಮೇಲೆ ಹೋಗುತ್ತದೆ ಅವರು ಇಂದಿಂಥಾ ಸೆಕ್ಟಾರಿಗೆ ಇಷ್ಟಿಷ್ಟು ಹಣ ಎಂದು ವರ್ಷ ವರ್ಷ ನಿಗದಿ ಮಾಡುತಾರೆ. ಪ್ರಯಾರಿಟಿ ಸೆಕ್ಟಾರಿನಲ್ಲಿ ವ್ಯವಸಾಯಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ. ವ್ಯವಸಾಯಕ್ಕೆ ಇಷ್ಟು ಹಣ ಖರ್ಚ ಮಾಡಬೇಕು ಎಂದು ಹೇಳಿದ್ದಾರೆ ಆದ್ದರಿಂದ ಬರೀ ಸಿನಿಮಾ ಥಿಯೇಟರುಗಳನ್ನು ಮತ್ತು ಹೋಟೆಲುಗಳನ್ನು ಕಟ್ಟುವುದಕ್ಕೆ ರಾಷ್ಟ್ರೀಕೃತ ಬ್ಯಾಂಕಗಳು ಸಾಲವನ್ನು ಕೊಟ್ಟಿದ್ದಾರೆ, ಆದ್ದರಿಂದ ವ್ಯವಸಾಯಕ್ಕೆ ಮತ್ತೊಂದಕ್ಕೆ ಹೆಚ್ಚಿಗೆ ಸಾಲವನ್ನು ಕೊಡುವಂತೆ ಮಾಡಬೇಕು ಎಂದು ಹೇಳಿದರೆ ಆದು ನಮ್ಮ ಕೈಯ್ಯಲ್ಲಿ ಇಲ್ಲ ಎಲ್ಲೆಲ್ಲಿ ಹೆಚ್ಚು ಸಾಲವನ್ನು ಕೊಡುವುದು ಸೂಕ್ತ ಎಂದು ಕಾಣುತ್ತದೆಯೋ ಅಲ್ಲಿ ಕೊಡುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಡೆಟ್‌ರೀಲೀಫ್ ಆಕ್ಟ್ ಜಾರಿಗೆ ಬಂದಮೇಲೆ ರೈತರಿಗೆ ಮತ್ತು ಕೂಲಿ ಗಾರರಿಗೆ ಬಹಳ ತೊಂದರೆಯಾಗಿದೆ. ಪಟ್ಟಣಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಕೋಟ್ಯಾಂತರ ರೂಪಾಯಿಗಳನ್ನು ಸಾಲ ಕೊಡುತ್ತವೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳು ಬಹಳ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಆದ್ದರಿಂದ ಗ್ರಾಮಾಂತರ ಜನಗಳಿಗೆ ಹಣ ಸಾಲ ಸಿಕ್ಕುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳುವ ಮಾತು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಬಹಳ ಜನಗಳಿಗೆ ಬೇರೆ ಕಡೆ ಎಲ್ಲೂ ಸಾಲ ಸಿಕ್ಕುವುದಿಲ್ಲ. ಅದಕ್ಕಾಗಿ ಜನಗಳಿಗೆ ಸಹಾಯ ಮಾಡಬೇಕು ಎನ್ನುವ ಒಂದು ಉದ್ದೇಶದಿಂದ ನಮ್ಮಲ್ಲಿ ಸೊಸೈಟಿಗಳನ್ನು ರೀ ಆರ್ಗನೈಜ್ ಮಾಡಿದ್ದೇವೆ. ಈಗ ಕೋ ಆಪರೇಟೀವ್ ಮೂವ್‌ಮೆಂಟ್ ದೇಶದಲ್ಲಿ ಆಗಬೇಕಾದ್ದು ಇದೆ ಎಂದೂ ಕೋ ಆಪರೇಟೀವ್ ಸೊಸೈಟಿಗಳನ್ನು ರೀ ಆರ್ಗನೈಜೇಷನ್ ಮಾಡಿ ಎಕನಾಮಿಕಲಿ ವಯಬಲ್ ಸೊಸೈಟಿಗಳನ್ನಾಗಿ ಮಾಡಿ 8 ಸಾವಿರ ಸೊಸೈಟಿಗಳು ಇದ್ದದ್ದನ್ನು 4 ಸಾವಿರ ಸೊಸೈಟಿಗಳಿಗೆ ಇಳಿಸಿದ್ದೇವೆ. ಇದರ ಜೊತೆಗೆ ಕೋ ಆಪರೇಟೀವ್ ಆಕ್ಟ್‌ನಲ್ಲಿ ತಿದ್ದುಪಡಿಯನ್ನು ತಂದು ಅದರ ಅದರ ಪ್ರಕಾರ ಹಳ್ಳಿಗಳಲ್ಲಿ ಸೊಸೈಟಿಯ ವ್ಯಾಪ್ತಿಯಲ್ಲಿರತಕ್ಕ ಪ್ರತಿಯೊಬ್ಬರಿಗೂ ಸೊಸೈಟಿಯಲ್ಲಿ ಸದಸ್ಯತ್ವವನ್ನು ಕೊಟ್ಟು ಅನುಕೂಲ ಮಾಡಬೇಕು ಎಂದು ಹೇಳಿದ್ದೇವೆ. ಅವರ ಎಕನಾಮಿಕ್ ಸ್ಟೇಟಸ್ ಏನೇ ಇರಲಿ ಅವರಿಗೆ ಸದಸ್ಯತ್ವವನ್ನು ನಿರಾಕರಿಸಕೂಡದು ಎಂದು ಹೇಳಿದ್ದೇವೆ. ಹರಿಜನ

ಗಿರಿಜನರು ಮತ್ತು ಎಕನಾಮಿಕಲ್ ಆಗಿ ಹಿಂದುಳಿದಿರತಕ್ಕವರಿಗೆ ಸದಶ್ಯತ್ವನ್ನು ಕೊಡಲು ಸರ್ಕಾರದವರೇ ಒಬ್ಬರಿಗೆ 10 ರೂಪಾಯಿಗಳನ್ನು ಕೊಟ್ಟು ಒಂದು ರೂಪಾಯಿಯನ್ನು ಮಾತ್ರ ಅವರಿಂದ ತೆಗೆದುಕೊಳ್ಳಬೇಕೆಂದೂ ವ್ಯವಸ್ಥೆ ಮಾಡಿದೆ. ಇದರ ಜೊತೆಗೆ ಎಲ್ಲಾ ಕಡೆಗಳಲ್ಲಿಯೂ ಸಣ್ಣ ಸಣ್ಣ ರೈತರಿಗೆ ಒಂದು ಯೋಜನೆಯನ್ನು ಮಾಡಿ ಎಸ್. ಎಫ್. ಡಿ ಮತ್ತು ಎಂ. ಎಫ್. ಎ. ಎಲ್. ಸ್ಕೀಮ್ ಕೆಳಗೆ ಅವರಿಗೆ ಸಾಲ ಸಿಕ್ಕುವ ವ್ಯವಸ್ಥೆ ಮಾಡಿದ್ದೇವೆ ಈ ರೀತಿ ದೊಡ್ಡ ಪ್ರಮಾಣದ ರೈತರಿಗೆ ಸಣ್ಣ ಸಣ್ಣ ರೈತರಿಗೆ ಸೊಸೈಟಿಗಳ ಮುಖಾಂತರ ಸಾಲ ಸಿಕ್ಕುವ ವ್ಯವಸ್ಥೆ ಮಾಡಿರುವುದು ತಮಗೆ ಗೊತ್ತಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಆಂಥಾ 100 ಸೊಸೈಟಿಗಳನ್ನು ವ್ಯವಸ್ಥೆ ಮಾಡಿ ಅವುಗಳು ಕೆಲಸ ಮಾಡುತ್ತಿವೆ. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶದ ಜನಗಳಿಗೆ, ರೈತರಿಗೆ ಸಾಲ ಸಿಕ್ಕುವುದು ತೊಂದರೆಯಾಗುತ್ತಿದೆ ಎಂದು ಹೇಳಿ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಡಿಫರೆರೆಷ್ಷಿಯರ್ ಇಂಟರೆಸ್ಟ್ ರೇಟಿನಲ್ಲಿ ಮತ್ತು ನಾಲ್ಕು ಪರ್ಸೆಂಟ್ ಪ್ರಕಾರ ಸಣ್ಣ ಸಣ್ಣ ರೈತರಿಗೆ ಸಾಲವನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿದೆ ಇದನ್ನು ಇಂಡಿಯಾನರ್ಕಾರದವರ ಫಾಲಸಿ ಪ್ರಕಾರ ಮಾಡಿದೆ. ಕರ್ನಾಟಕ ರಾಜ್ಯದಲ್ಲಿ ಜನಗಳು ಇದರ ಉಪಯೋಗವನ್ನು ಹೆಚ್ಚಿಗೆ ಮಾಡಿಕೊಂಡಿದ್ದಾರೆ.

ಡಿ. ಐ. ಆರ್. ಸ್ಕೀಂ ಕೆಳಗೆ 8 ಡಿಸ್ಟ್ರಿಕ್ಟ್‌ಗಳಿಗೆ ಸಾಲವನ್ನು ಕೊಟ್ಟಿರತಕ್ಕಂಥಾದ್ದು ಈ ರೀತಿ ಇದೆ. —

(1) ಕೋಲಾರದಲ್ಲಿ 3,934 ಜನ ಆರ್ಟಿಸಾನ್ಸ್‌ಗೆ 10 64,892 ರೂಪಾಯಿಗಳನ್ನು ಸಾಲ ಕೊಟ್ಟಿದೆ. (2) ಶಿವಮೊಗ್ಗದಲ್ಲಿ 4 96 ಜನಕ್ಕೆ 27,24,956 ರೂಪಾಯಿಗಳನ್ನು ಸಾಲ ಕೊಟ್ಟಿದೆ. (3) ಮಂಡ್ಯದಲ್ಲಿ 2,494 ಜನಕ್ಕೆ 12 3 3775 ರೂಪಾಯಿಗಳನ್ನು ಸಾಲ ಕೊಟ್ಟಿದೆ. (4) ಚಿಕ್ಕಮಗಳೂರಿನಲ್ಲಿ 2, 479 ಜನಕ್ಕೆ 12,01 871 ರೂಪಾಯಿಗಳ ಸಾಲ ಕೊಟ್ಟಿದೆ

ಶ್ರೀ ಕೋಣಂದೂರು ಲಿಂಗಪ್ಪ. —ಉಡುಪಿಗೆ ಜಾಸ್ತಿ ಕೊಟ್ಟಿದ್ದೀರಿ. ನೇರವಾಗಿ ಜನರ ಕೈಗೆ ಹೋಗಿರುವುದು ಎಷ್ಟು ?

ಶ್ರೀ ಡಿ ದೇವರಾಜ ಅರಸ್,—ಹಾಗೇನಿಲ್ಲ ಒಂದು ವೇಳೆ ಉಡುಪಿಗೆ ಜಾಸ್ತಿಕೊಟ್ಟಿದ್ದರೆ ಅಷ್ಟರತಕ್ಕ ಆರ್ಟಿಸಾನ್ಸೂ ಬಡವರು ತಾನೇ ?

ಶ್ರೀ ಕೋಣಂದೂರು ಲಿಂಗಪ್ಪ —ಹಣ ಕೊಟ್ಟಿದ್ದು ತಪ್ಪು, ಕೊಟ್ಟಿಲ್ಲ ಎಂದು ನಾನು ಹೇಳುತಾ ಇಲ್ಲ. ನೀವು ಕೊಟ್ಟಿರತಕ್ಕ ಹಣ ನೇರವಾಗಿ ಅವರ ಕೈಗೆ ಹೋಗಿಲ್ಲ ಬೇರೆಯವರ ಬಾಯಿಗೆ ಹೋಗಿದೆ.

ಶ್ರೀ. ಡಿ. ದೇವರಾಜ್ ಅರಸ್—ಸಾರ್ವಜನಿಕ ಕ್ಷೇತ್ರದಲ್ಲಿ ಕಲಸಮಾಡತಕ್ಕವರು ಇದರ ಬಗ್ಗೆ ಅನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಪೋಸ ಮಾಡತಕ್ಕಂಥ ಸಂದರ್ಭಗಳಿವೆ. ಅದಕ್ಕೆ ಪ್ರತ್ಯುಪಾಯ ಏನು ? The only remedy is the people who are in the political field of any party, I am not concerned with this or that party, should make up their mind and see that these things are shown properly. ಆಮೇಲೆ (5) ಬಳ್ಳಾರಿಯಲ್ಲಿ 1,57 ಜನಕ್ಕೆ, 7,37,275 ರೂಪಾಯಿಗಳನ್ನು ಕೊಟ್ಟಿದೆ. (6) ಕೊಡಗಿನಲ್ಲಿ 1,170 ಜನಕ್ಕೆ 4,93,580 ರೂಪಾಯಿಗಳನ್ನು ಕೊಟ್ಟಿದೆ. (7) ಚಿತ್ರದುರ್ಗದಲ್ಲಿ 4,098 ಜನಕ್ಕೆ 22,30,103 ರೂಪಾಯಿಗಳನ್ನು ಕೊಟ್ಟಿದೆ. (8) ಬೆಂಗಳೂರಿನಲ್ಲಿ 10,815 ಜನಕ್ಕೆ 60,6 ,789 ರೂಪಾಯಿಗಳನ್ನು ಕೊಟ್ಟಿದೆ. ಇದೇ ಡಿ. ಐ ಆರ್. ಸ್ಕೀಂ ಕೆಳಗೆ ಹಿಂದುಳಿದ 11 ಜಿಲ್ಲೆಗಳಿಗೆ ಈ ರೀತಿ ಸಾಲವನ್ನು ಕೊಟ್ಟಿದೆ —

(1)	ಬೆಳಗಾಂನಲ್ಲಿ	8,950 ಜನಕ್ಕೆ	ರೂ. 57,75,508
(2)	ಬೀದರ್	881	ರೂ 4,40.734
(3)	ಬಿಜಾಪುರ್	6,600	ರೂ. 28.36,990
(4)	ಧಾರವಾಡ	11,723	ರೂ. 49,52,394
(5)	ಗುಲ್ಬರ್ಗ	3,471	ರೂ. 15,40,917
(6)	ಹಾಸನ್	12,750	ರೂ. 43,27,048

(7)	ಮೈಸೂರು	19,648	ರೂ. 67,87,818
(8)	ನಾರ್ತ್ ಕೆನರಾ	4,966	ರೂ. 17,60,214
(9)	ಸೌತ್ ಕೆನರಾ	20,389	ರೂ. 85,10,690
(10)	ರಾಯಚೂರ್	3,303	ರೂ. 7,86,833
(11)	ತುಮಕೂರು	7,900	ರೂ. 316,3,356

I would like to inform in this connection that the Government of India and the Reserve Bank of India have told us that we should confine overselves to the 11 Districts in our State. But we took a decision that this scheme should be made applicable to the entire State. If it is to be made applicable to the entire State, somebody has to bear and pay the differential interest. Normllay, the Bank rate is 14 per cent. Out of this 14%, 10% of the money by way of interest will be paid by the Government of India and the rest of 4% is to be paid by the party. This scheme is to help the poorer sections of the people, Thinking that we should help the poorer sections of the people, we took a decision to see that the diffesrential interest is paid by us, so that this scheme may be made applicable to every district and the poor people are helped. In this way we took this decision to take up that responsibility of implementing this scheme to all the Districts in the State. Therefore, the people who have been affected by the implementation of this debt liquidation Act will largly be benefitted through the Co-operative Societies and the Nationalised Banks through which the loan facilities are provided I do not say we have been able to cover every person affected. There may be a good number of them still uncovered by this scheme, I, request all the members in she Districts as well as in the Assembly Constituencies take greater interest in making these people to become the members of the Societies, so that our desire to fulfill the target is achieved. If they become the members of the Societies, they will be entitled to get a small loan of Rs. 100, 150 and 200 as consumption loan. The Reserve Bank of India has refused to give this consumption loan. In the last meeting held at Bangalore by the then Finance Minister Sri C. Subramanyam, we took a decision that this consumption loan should be made available to the poorer sectioos of the people. Likewise the pattern of loan less giving has been changed and the people will be in a position to get these loans through these these Societies and Banks.

ಶ್ರೀ ಕೋಣಂದೂರು ಲಿಂಗಪ್ಪ.—ಈ ಡಿ. ಐ ಆರ್. ಸ್ಕೀಂ ಕೆಳಗೆ ಲೋನ್ ಪಡೆಯಲು ಹೋಗತಕ್ಕವರಿಗೆ ಕುಟುಂಬ ಯೋಜನೆ ಸರ್ಟಿಫಿಕೇಟ್ ತೆಗೆದುಕೊಂಡು ಬಾ ಎಂದು ಹೇಳುತ್ತಿರುವುದು ನತ್ಯ ಆಲ್ಲವೆ ?

SRI. D. DEVARAJ URS,—We are not going to coerce anybody in this matter. This is a policy not declared now but it is being adopted since a long time.

ಶ್ರೀ ಎಚ್. ಬಿ. ಕೃಷ್ಣಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿ ಸಾಲಗಳ ಬಗ್ಗೆ ಹೇಳುವುದಾದರೆ, ಅಭಿವೃದ್ಧಿ ಸಾಲಗಳು ಸಿಕ್ಕುತ್ತಾ ಇವೆ. ಆದರೆ ಆವಶ್ಯಕತೆಯನ್ನು ಪೂರೈಸುವುದಕ್ಕೆ ಸ್ವಲ್ಪ ತೊಂದರೆಗಳು ಬರುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ಕನ್ ಸಂಪ್ಷನ್ ಲೋನ್ ಎಂದು ಕೊಡುತ್ತಾರೆ. ಮುಂಡ್ಯಾಕ್ಕೆ 10 ಲಕ್ಷ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಒಂದು ತಾಲ್ಲೂಕಿಗೆ 10 ಲಕ್ಷ ರೂಪಾಯಿಗಳು ಸಾಲುವುದಿಲ್ಲ. ಆದುದರಿಂದ ಈ ಮೊಬಲಗನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

SRI D DEVARJ URS.—Of-course our desire is to get more and more loans through the Reserve Bank. The whole matter is ultimately governed by the Reserve Bank Policy which is in turn guided by the Central Government. Therefore, let us see that we get more and more funds. Now our friends are there and they may help us.

1-30 P. M.

Irrigation Facilities to Tumkur District.

44. SRI B. BHYRAPPAJI (Turuvekere).—Will the Chief Minister be pleased to state :—

(*a*) the villages for which the estimate for irrigation scheme has been prepared for in Tumkur District by extending the Hemavati Left Bank-channel ;

(*b*) if so, the expenditure likely to be incurred for the above channel ;

(*c*) the extent of land that comes under cultivation by extending of the said channel ;

(*d*) whether the Government would arrange to start the channel work this year itself as the famine conditions prevail due to failure of rains?

SRI D. DEVARAJ URS (Chief Minister).—

(*a*) It is proposed to provide irrigation facilities from the second stage of Hemavathi Left Bank channel to Tiptur, Turuvekere, Gubbi, Tumkur and Kunigal taluks of Tumkur district The other details are being worked out.

(*b*) The estimated amounts of Tumkur division left bank channel is Rs. 4,882 lakhs and that in respect of Nagamangala division is Rs. 2418 lakhs.

(*c*) It is estimated that a total of 5,12,000 acres of land would come under irrigation with the extension of Tumkur and Nagamangala divisions.

(*d*) The mater is under consideration.